ಪ್ರಾರ್ಥನೆ

# ಶ್ರೀರಾಮಕೃಷ್ಣ ಪ್ರಣತಿಮಾಲಿಕಾ - ೧

**ಜಗತೋ ಜನ್ಮಮೂಲಾಯ ತಸ್ಯೈವ ಸ್ಥಿತಿಹೇತವೇ ।**
**ಉಪಸಂಹಾರಕರ್ತ್ರೇ ಚ ರಾಮಕೃಷ್ಣಾಯ ತೇ ನಮಃ ॥ ೧ ॥**

ಜಗತ್ತಿನ ಉತ್ಪತ್ತಿಗೆ ಮೂಲಕಾರಣನಾದ, ಅದರ ಸ್ಥಿತಿ ಅಥವಾ ಪಾಲನೆಗೂ ಹೇತುವಾಗಿರುವ, ಅದರ ಸಂಹಾರವನ್ನೂ ಮಾಡುವ ಶ್ರೀರಾಮಕೃಷ್ಣರನ್ನು ನಮಿಸುತ್ತೇನೆ.

**ಧರ್ಮಹಾನಾವಧರ್ಮಸ್ಯ ವೃದ್ಧೌ ಸತ್ಯಾಂ ಜನಿಂ ಭುವಿ ।**
**ವೃಣ್ವೇ ಹೀತಿ ಪ್ರತಿಜ್ಞಾತಂ ಶಿರಸಾ ಪ್ರಣತೋಽಸ್ಮ್ಯಹಮ್ ॥ ೨ ॥**

'ಧರ್ಮಗ್ಲಾನಿಯೂ ಅಧರ್ಮದ ವೃದ್ಧಿಯೂ ಆದಾಗ ನಾನು ಜಗತ್ತಿನಲ್ಲಿ ಅವತಾರವೆತ್ತಿ ಬರುತ್ತೇನೆ' ಎಂದು ಪ್ರತಿಜ್ಞೆ ಮಾಡಿದ ಶ್ರೀರಾಮಕೃಷ್ಣರಿಗೆ ನಾನು ಪ್ರಣಾಮ ಮಾಡುತ್ತೇನೆ.

**ಸನಾತನಸ್ಯ ಧರ್ಮಸ್ಯ ಪ್ರದತ್ತಸ್ಯ ಮಹರ್ಷಿಭಿಃ ।**
**ಪ್ರಹಾಣಿಂ ಪರಿತೋ ದೃಷ್ಟ್ವಾ ಸಂತಾಪಿತವತೇ ನಮಃ ॥ ೩ ॥**

ಮಹರ್ಷಿಗಳಿಂದ ನೀಡಲ್ಪಟ್ಟ ಸನಾತನ ಧರ್ಮದ ಗ್ಲಾನಿಯನ್ನು ಎಲ್ಲೆಡೆ ನೋಡಿ ಸಂತಾಪಗೊಂಡ ಶ್ರೀರಾಮಕೃಷ್ಣರನ್ನು ನಮಿಸುತ್ತೇನೆ.

**ವಿತ್ತೇಶಪೂಜಿತೌ ಪಾದೌ ಯಸ್ಯ ತಂ ವಿತ್ತಶೂನ್ಯತಾಮ್ ।**
**ಪ್ರಾಪ್ತಸ್ಯ ಕ್ಷುದಿರಾಮಸ್ಯ ಕುಲೇ ಜಾತಂ ನತೋಽಸ್ಮ್ಯಹಮ್ ॥ ೪ ॥**

ಸಂಪತ್ತಿನ ಒಡೆಯನಾದ ಕುಬೇರನಿಂದ ಪೂಜಿತನಾದ, ಆದರೆ ಸ್ವತಃ ತಾನೇ ಸಂಪತ್ತಿನಿಂದ ರಹಿತನಾದ, ಕ್ಷುದಿರಾಮನ ಕುಲದಲ್ಲಿ ಜನಿಸಿದ ಶ್ರೀರಾಮಕೃಷ್ಣದೇವನನ್ನು ನಮಿಸುತ್ತೇನೆ.

**ಅನ್ನವಿದ್ಯಾಂ ವಿಹಾಯಾಶು ಬ್ರಹ್ಮವಿದ್ಯಾಪರಿಗ್ರಹಮ್ ।**
**ಕುರ್ವಂತಮನ್ನಪೂರ್ಣಾಯಾಃ ಪತಿಂ ವಂದೇ ಗದಾಧರಮ್ ॥ ೫ ॥**

ಅನ್ನವನ್ನು ನೀಡುವ ವಿದ್ಯೆಯನ್ನು ತ್ಯಾಗ ಮಾಡಿದ, ಬ್ರಹ್ಮವಿದ್ಯೆಯನ್ನು ಸ್ವೀಕರಿಸಿದ, ಅನ್ನಪೂರ್ಣೆಯ ಸ್ವರೂಪಿಯೇ ಆದ ಶ್ರೀ ಶಾರದಾದೇವಿಯವರ ಪತಿಯಾದ ಶ್ರೀ ಗದಾಧರನನ್ನು ವಂದಿಸುತ್ತೇನೆ.



**ದುಷ್ಪ್ರಾಪ್ಯೋ ಯೋಗಿಭಿರ್ಯಸ್ತು ತಂ ಸಮಾಧಿಂ ಪರಂ ಸುಖಮ್ ।**
**ಬಾಲ್ಯ ಏವ ಬಲಾಕಾನಾಂ ದೃಶ್ಯಾತ್ ಪ್ರಾಪ್ತಂ ಸಮಾಶ್ರಯೇ ॥ ೬ ॥**

ಯೋಗಿಗಳಿಗೂ ಸುಲಭವಾಗಿ ಲಭಿಸದ, ಸಮಾಧಿಯ ಪರಮ ಸುಖವನ್ನು ತನ್ನ ಬಾಲ್ಯದಲ್ಲೇ ಬೆಳ್ಳಕ್ಕಿಗಳ ದರ್ಶನದಿಂದ ಪಡೆದ ಶ್ರೀ ರಾಮಕೃಷ್ಣ ಪರಮಹಂಸರಲ್ಲಿ ಆಶ್ರಯವನ್ನು ಪಡೆಯುತ್ತೇನೆ.

— ಸ್ವಾಮಿ ಹರ್ಷಾನಂದ

## ಸೂಕ್ತಿಪ್ರಭ

**ಸ**ತ್ಯವೂ ಜ್ಞಾನವೂ ಅನಂತವೂ ಆದದ್ದೇ ಬ್ರಹ್ಮ.

—ತೈತ್ತಿರೀಯೋಪನಿಷತ್ತು

**ಪೂ**ರ್ಣತೆ ಯಾವಾಗಲೂ ಅನಂತವಾದುದು. ನಾವು ಈಗಾಗಲೇ ಅನಂತವಾಗಿದ್ದೇವೆ; ಅದನ್ನು ವ್ಯಕ್ತಪಡಿಸಲು ಯತ್ನಿಸುತ್ತಿದ್ದೇವೆ. ನೀವು, ನಾನು, ಮತ್ತೆಲ್ಲರೂ ಅದನ್ನು ವ್ಯಕ್ತಗೊಳಿಸಲು ಪ್ರಯತ್ನಿಸುತ್ತಿದ್ದೇವೆ.

— ಸ್ವಾಮಿ ವಿವೇಕಾನಂದ

**ಪ್ರೀ**ತಿಯ ಒಂದು ಉಸಿರು ನಿನ್ನನ್ನು ಅನಂತದೆಡೆಗೆ ಕರೆದೊಯ್ಯಬಲ್ಲುದು.

— ರೂಮಿ

**ಅಂ**ಗೈಯಲ್ಲಿ ನೀ ಅನಂತವ ಹಿಡಿದರೆ
ಗಂಟೆಯವಧಿಯಲಿ ಅನಂತವ ಹಿಡಿದರೆ
ಮರಳ ಕಣದಲ್ಲಿ ಜಗವ ಕಾಣುವೆ;
ಕಾಡು ಹೂವಿನಲಿ ಸ್ವರ್ಗ ಕಾಣುವೆ.

— ವಿಲಿಯಂ ಬ್ಲೇಕ್

**ಪ್ರ**ತಿಯೊಂದು ಹೆಜ್ಜೆಯಲ್ಲೂ ನಾವು ಅನಂತವನ್ನು ದಾಟಿ ಹೋಗುತ್ತೇವೆ; ಪ್ರತಿ ಕ್ಷಣದಲ್ಲೂ ನಾವು ಅನಂತವನ್ನು ಭೇಟಿಯಾಗುತ್ತೇವೆ.

— ರವೀಂದ್ರನಾಥ ಠಾಕೂರ್